# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.632/2025

| | | |
|---|---|---|
| ಸಾಕ್ಷಿದಾರರ ಹೆಸರು | ಡಾಃ ಶಿವಸಂಗಮ್ | ಸಿ.ಡಬ್ಲ್ಯು-7 |
| ತಂದೆಯ ಹೆಸರು | ಬಸವರಾಜ್ ಜಿ | ಪಿ .ಡಬ್ಲ್ಯೂ-2 |
| ವಯಸ್ಸು | 35 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಆರ್ಥೋಪೆಡಿಕ್ ಸರ್ಜನ್, ಉಪ ವಿಭಾಗೀಯ ಆಸ್ಪತ್ರೆ, ಸಾಗರ | ದಿನಾಂಕಃ |
| ವಾಸಃ | ಸಾಗರ | 21.04.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** 2023 ರಿಂದ ಈವರೆಗೆ ನಾನು ಸಾಗರದ ಉಪ ವಿಭಾಗೀಯ ಆಸ್ಪತ್ರೆಯಲ್ಲಿ ಆರ್ಥೋಪೆಡಿಕ್ ಸರ್ಜನ್ ಆಗಿ ಸೇವೆ ಸಲ್ಲಿಸುತ್ತಿದ್ದೇನೆ.

**2.** ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 23.02.2025 ರಂದು ಚಾ.ಸಾ 1 ರವರು ಹಲ್ಲೆಯ ಹಿನ್ನಲೆಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯಲು ನನ್ನ ಬಳಿ ಬಂದಿದ್ದರು. ಅವರು ನನಗೆ ಮೂರು ಜನ ಸೇರಿ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿದರು. ಅವರನ್ನು ಪರೀಕ್ಷಿಸಿದಾಗ ಅವರಿಗೆ ಯಾವುದೇ ಬಾಹ್ಯ ಗಾಯಗಳು ಕಂಡು ಬಂದಿರುವುದಿಲ್ಲ. ಇ.ಎನ್.ಟಿ ತಜ್ಞರಿಂದ ಪರೀಕ್ಷೆ ಮಾಡಿಕೊಳ್ಳುವಂತೆ ನಾನು ಸಲಹೆ ನೀಡಿದ್ದೇನೆ. ಚಾ.ಸಾ 1 ರವರು ಹೇಳಿದ ಹೇಳಿಕೆಯಂತೆ ನನ್ನ ಅಭಿಪ್ರಾಯದಲ್ಲಿ ಚಾ.ಸಾ 1 ರವರಿಗೆ ಸಾದಾ ಸ್ವರೂಪದ ಗಾಯ ಆಗಿರಬಹುದು. ಈ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ಮರದ ಸ್ಕೇಲ್ ನಿಂದ ಹೊಡೆದಾಗ ಚಾ.ಸಾ 1 ರವರು ಹೇಳಿದಂತಹ ಗಾಯ ಆಗುವ ಸಾಧ್ಯತೆ ಇದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ. ಕೆ.ಕೆ.ಎಸ್ ರವರಿಂದಃ-**

**1.** ಚಾ.ಸಾ 1 ರವರು ಚಿಕಿತ್ಸೆಗೆ ಬಂದಾಗ ಮಧ್ಯಾಹ್ನ ಸುಮಾರು 12.50 ಗಂಟೆಯಾಗಿತ್ತು. ಮಾನವನ ದೇಹದಲ್ಲಿ ಮೂಗು ಒಂದು ಸೂಕ್ಷ್ಮ ಜಾಗವಾಗಿದ್ದು, ಅದಕ್ಕೆ ಯಾವುದೇ ಒಂದು ಸಣ್ಣ ವಸ್ತು ತಾಗಿದರೂ

ಸಹ ರಕ್ತ ಬರುವ ಸಾಧ್ಯತೆ ಇದೆ. ಸ್ಕೇಲಿನಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಹೊಡೆದಾಗ ರಕ್ತ ಬರುವ ಸಾಧ್ಯತೆ ಇದೆ. ಈ ಪ್ರಕರಣದ 3 ನೇ ಆರೋಪಿತಳು ಆ ದಿನ ನನ್ನ ಬಳಿ ಚಿಕಿತ್ಸೆ ಪಡೆದಿದ್ದಾಳೆ ಎಂದರೆ ಸರಿ. ಆರೋಪಿತರು ಚಾ.ಸಾ 1 ರವರ ವಿರುದ್ಧ ದೂರನ್ನು ನೀಡುತ್ತಾರೆ ಎನ್ನುವುದರಿಂದ ತಪ್ಪಿಸಿಕೊಳ್ಳಲು ಸದರಿಯವರು ನನ್ನ ಬಳಿ ಚಿಕಿತ್ಸೆಗಾಗಿ ಬಂದಿದ್ದರು ಎಂದರೆ, ನನಗೆ ಗೊತ್ತಿಲ್ಲ. ಏಕಾಏಕಿ ಮನೆಯಲ್ಲಿನ ಗೋಡೆಗೆ ಮೂಗು ತಾಗಿದರೆ ನಿಪಿ–6 ರಲ್ಲಿ ಕಂಡಂತಹ ಗಾಯ ಆಗುವ ಸಾಧ್ಯತೆ ಇದೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.